**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 119/2016</u>**

ದಿನಾಂಕಃ**. 25.02.2026.** ರಂದು ಸಾಕ್ಷಿಗೆ ಮದ್ಯಾಹ್ನ **4.05** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಚಾಸಾ-**6** | ಪ್ರಾಸಾ-**6** |
| ಹೆಸರು | - ಜಯರಾಂ ಎಂ.ಕೆ |
| ತಂದೆ ಹೆಸರು | - ಪರ್ವತಯ್ಯ |
| ವಯಸ್ಸು | - **66** |
| ಉದ್ಯೋಗ | - ನಿವೃತ್ತ , ಪಿ.ಎಸ್,ಐ |
| ವಿಳಾಸ | - ಚನ್ನಪಟ್ಟಣ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ನಾನು **2013** ರಿಂದ **2016** ರವರೆಗೆ ನಾನು ಸಾತನೂರು ಪೋಲಿಸ್ ಠಾಣೆಯಲ್ಲಿ ಪಿ. ಎಸ್. ಐ ಆಗಿ ಕೆಲಸ ನಿರ್ವಹಿಸಿದ್ದೇನೆ.

ದಿನಾಂಕಃ **16.12.2013** ರಂದು ರಾತ್ರಿ **1.30** ಗಂಟೆ ಸಮಯದಲ್ಲಿ ನಾನು, ಚಾ.ಸಾ. **2** ಮತ್ತು **3** ರವರು ಗಸ್ತು ಕರ್ತವ್ಯದಲ್ಲಿರುವಾಗ ಹೊಸಕಬ್ಬಾಳು ಹತ್ತಿರ ಇರುವ ಚೂಡನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಹತ್ತಿರ ಒಬ್ಬ ಆಸಾಮಿ ದ್ವಿ ಚಕ್ರ ವಾಹನದಲ್ಲಿ ಇನ್ನೊಬ್ಬ ವ್ಯಕ್ತಿಯೊಂದಿಗೆ ಹಿಂದೆ ಕುಳುತ್ತಿದ್ದ ವ್ಯಕ್ತಿಯ ಹತ್ತಿರ ಎರಡು ನಾಡಬಂದೂಕು ಇತ್ತು. ನಮ್ಮನ್ನು ನೋಡಿ ಹಿಂದೆ ಕುಳಿತ್ತಿದ್ದ ವ್ಯಕ್ತಿ ನಾಡಬಂದೂಕನ್ನು ಬಿಸಾಡಿ ಓಡಿ ಹೋದರು. ಸದರಿ ದ್ವಿ ಚಕ್ರ ವಾಹನದ ಸಂಖ್ಯೆಃ ಕೆ ಎ **41** ಡಬ್ಲ್ಯೂ **7133.** ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ರಾಜು ನಾಯ್ಕ ಎಂದು ಹೇಳಿದ. ಓಡಿಹೋದ ಹೆಸರನ್ನು ಕೇಳಲಾಗಿ ಗೋಪಾಲ ನಾಯ್ಕ ಎಂದು **1** ನೇ ಆರೋಪಿ ನನಗೆ ತಿಳಿಸಿದ.

ಸದರಿ ಆರೋಪಿಗೆ ಬಂದೂಕುಗಳನ್ನು ತೆಗೆದುಕೊಂಡು ಹೋಗಲು ಪರವಾನಿಗೆ ಕೇಳಲಾಗಿ ಇಲ್ಲ ಎಂದು ಹೇಳಿದ್ದರಿಂದ ರಾತ್ರಿ **2** ಗಂಟೆಯಿಂದ **2.45** ಗಂಟೆವರೆಗೆ ಪಂಚನಾಮೆ ಮಾಡಿ ಬಂದೂಕುಗಳು ಮತ್ತು ವಾಹನವನ್ನು ಜಪ್ತುಪಡಿಸಿಕೊಂಡು ಆರೋಪಿಯೊಂದಿಗೆ ಠಾಣೆಗೆ ಬೆಳೆಗ್ಗೆ **3.20** ಗಂಟೆಗೆ ಬಂದು ಚಾ.ಸಾ. **9** ರವರಿಗೆ ವರದಿಯನ್ನು ನೀಡಿದೆ.

ಸಾಕ್ಷಿ ಒಂದು ವರದಿಯನ್ನು ನೋಡಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ಈಗಾಗಲೇ ನಿ.ಪಿ.**4** ಎಂದು ಗುರುತಿಸಿದ್ದು , ಸಾಕ್ಷಿಯ ಸಹಿ ಯನ್ನು ನಿ.ಪಿ **4(**ಬಿ.**)** ಎಂದು ಗುರುತಿಸಲಾಯಿತು.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-**1(**ಡಿ**)** ಎಂದು ಗುರುತಿಸಲಾಯಿತು.

ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ಕಡತವನ್ನು ಚಾ.ಸಾ. **9** ರವರಿಂದ ಪಡೆದುಕೊಂಡು ಬಂದೂಕುಗಳ ಬಗ್ಗೆ ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡು ಎಸ್ ಎಂಬ ಅಕ್ಷರದಿಂದ ಶೀಲ್ ಮಾಡಿ ಎಪ. ಎಸ್.ಎಲ್ ಗೆ ಕಳುಹಿಸಿದೆ.

ದಿನಾಂಕಃ **17.12.2013** ರಂದು ಚಾ.ಸಾ. **3** ರಿಂದ **6** ರವರ ಹೇಳಿಕೆಗಳನ್ನು ಪಡೆದುಕೊಂಡೆ.

ದಿನಾಂಕಃ **23.12.2013** ರಂದು ರಾಸಾಯನಿಕ ಪರೀಕ್ಷೆಗಾಗಿ **2** ನಾಡಬಂದೂಕುಗಳನ್ನು ಎಫಎಸ್.ಎಲ್ ಕಳುಹಿಸಿದೆ. ದಿನಾಂಕಃ **06.01.2014** ರಂದು **2**ನೇ ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದಿದ್ದು ಜಾಮೀನು ಪಡೆದುಕೂಂಡು ಅವನನ್ನು ಬಿಡುಗಡೆ ಮಾಡಿರುತ್ತೇನೆ.

ದಿನಾಂಕಃ **10.01.2014** ರಂದು ಆರೋಪಿತರ ವಿರುದ್ಧ ನಾನು ಆರ್ಮ್ಸ್ ಆಕ್ಟ ಅಡಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ಜಿಲ್ಲಾಧಿಕಾರಿ ರಾಮನಗರ ಇವರ ಅನುಮತಿಯನ್ನು ಕೋರಿರುತ್ತೇನೆ. ದಿ. **29.04.2014** ರಂದು ಸದರಿ ಅನುಮತಿ ಪತ್ರವನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿ ಒಂದು ಪತ್ರವನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು, ಸದರಿ **ಪತ್ರವನ್ನು** ನಿಪಿ-**6** ಎಂದು, ಸಾಕ್ಷಿ ಸಹಿಯನ್ನು ನಿಪಿ-**6(ಎ)** ಎಂದು ಗುರುತಿಸಲಾಯಿತು.

ದಿನಾಂಕಃ **02.09.2014** ರಂದು ಎಫ್.ಎಸ್,ಎಲ್ನಿಂದ ವರದಿಯನ್ನು ಸ್ವೀಕರಿಸಿಕೊಂಡು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿ ಒಂದು ವರದಿಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ವರದಿ ಎಂದು ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-**7** ಎಂದು, ಸಾಕ್ಷಿ ಸಹಿಯನ್ನು ನಿಪಿ-**7(ಎ)** ಎಂದು ಗುರುತಿಸಲಾಯಿತು.

ಸಾಕ್ಷಿ ಮಾದರಿ ಶೀಲನ್ನು ನೋಡಿ, ಎಫ್,ಎಸ್.ಎಲ್. ಅವರು . ನೀಡಿರುವ ಮಾದರಿ ಶೀಲ್ ಎಂದು ಗುರುತಿಸಿದ್ದು ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ವರದಿ ಎಂದು ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-**8** ಎಂದು, ಸಾಕ್ಷಿ ಸಹಿಯನ್ನು ನಿಪಿ-**8(ಎ)** ಎಂದು ಗುರುತಿಸಲಾಯಿತು.

ನಾನು ಜಪ್ತುಪಡಿಸಿಕೊಂಡ ಮುದ್ದೆಮಾಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ **2** ಬಂದೂಕುಗಳನ್ನು ನೋಡಿ ಗುರುತಿಸಿದ್ದು ಸದರಿ ನಾಡ ಬಂದೂಕುಗಳು ಎಂದು ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಓ **1** ಮತ್ತು **2** ಎಂದು ಗುರುತಿಸಲಾಗಿದೆ.

ಗೈರು ಹಾಜರಿರುವ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲು: ಆರೋಪಿ ಪರ . ಪಿ.ಎಸ್.ಆರ್. ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ಕಡತವನ್ನು ನೋಡದೇ ಸಾಕ್ಷ್ಯ ನುಡಿಯಲು ಸಾಧ್ಯವಿಲ್ಲ ಎಂದರೆ ಸರಿ. ಘಟನಾ ದಿನ ಎಷ್ಟೊತ್ತಿಗೆ ರಸ್ತೆ ಗಸ್ತು ಕರ್ತವ್ಯ ಶುರುಮಾಡಿದೆವು ಎಂದು ಈಗ ನೆನಪಿಲ್ಲ ಸಾಕ್ಷಿ ಮುಂದುವರೆದು ಸಾಮಾನ್ಯವಾಗಿ ರಾತ್ರಿ 10 ಗಂಟೆಗೆ ಶುರು ಮಾಡುತ್ತೇವೆ.

ಸಾತನೂರು ಪಟ್ಟಣದಲ್ಲಿ ಎಷ್ಟು ಹೊತ್ತು ಗಸ್ತು ಮಾಡಿದೆವು ಎಂದು ಈಗ ನೆನಪಿಲ್ಲ. ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಷ್ಟು ಹೊತ್ತು ಗಸ್ತು ಕರ್ತವ್ಯ ಮಾಡಿದೆವು ಎಂದು ಈಗ ನೆನಪಿಲ್ಲ ಸಾಕ್ಷಿ ಮುಂದುವರೆದು ರಾತ್ರಿ 1.15 ಗಂಟೆವರೆಗೆ ಗಸ್ತು ಕರ್ತವ್ಯ ಮಾಡಿದ್ದೇವೆ. ರಾತ್ರಿ 1.15 ಗಂಟೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಇದ್ದೆವು. ಸಾತನೂರು ಪೋಲಿಸ್ ಠಾಣೆ ಸರಹದ್ದು ಕನಕಪುರದ ಅಂಚಿನವರೆಗೆ ಬರುತ್ತದೆ ಮತ್ತು ಅದು 15 ಕಿ.ಮೀ ಇದೆ ಎಂದರೆ ಸರಿ. ಸಾತನೂರು ಸ ರ್ಕಲ್ ನಿಂದ ಹೊಸ ಕಬ್ಬಾಳು ಸುಮಾರು 10 ಕಿ.ಮೀ ದೂರದಲ್ಲಿದೆ. ಘಟನಾ ದಿನದಿಂದ ಸಾತನೂರು ಸರ್ಕಲ್ ಕಡೆಯಿಂದ ಕಬ್ಬಾಳು ಕಡೆಗೆ ಹೋಗುತ್ತಿದ್ದೆವು. ಕಬ್ಬಾಳು ಗ್ರಾಮಕ್ಕೆ ಎಷ್ಟೊತ್ತಿಗೆ ಹೋಗಿದೆವು ಎಂದು ನೆನಪಿಲ್ಲ.

ಸೂರನಹಳ್ಳಿಗೆ ಹೋಗುವ ರಸ್ತೆಯಲ್ಲಿ ದ್ವಿಚಕ್ರ ವಾಹನ ಬರುತ್ತಿತ್ತು. 2 ನೇ ಆರೋಪಿಯ ಬಳಿ ಬಂದೂಕುಗಳು ಇದ್ದವು. ಘಟನಾ ಸ್ಥಳದಲ್ಲಿ ನಾನು ಮತ್ತು ನನ್ನ ಸಿಬ್ಬಂದಿ ಒಟ್ಟು 3 ಜನ ಇದ್ದೆವು. ಅಕ್ಕಪಕ್ಕದಲ್ಲಿ ಯಾರೂ ಜನರು ಇರಲಿಲ್ಲ. ಸಾಕ್ಷಿದಾರರನ್ನು ಕರೆದುಕೊಂಡು ಬರಲು ಸಿಬ್ಬಂದಿಯಾದ ಚಾ.ಸಾ. 2 ರವರನ್ನು

ಕಳುಹಿಸಿದೆ. ಈ ಬಗ್ಗೆ ವರದಿಯಲ್ಲಿ ಮತ್ತು ಮಹಜರ್ ನಲ್ಲಿ ನಮೂದು ಮಾಡಿಲ್ಲ. ಹೊಸಕಬ್ಬಾಳುವಿನಿಂದ 10 ಕಿ.ಮೀ ದೂರದಲ್ಲಿ ಹೊಂಗಾಣಿದೊಡ್ಡಿ ಇದೆ. ಸಾತನೂರುನಿಂದ ಅಚ್ಚಲು ಗ್ರಾಮಕ್ಕೆ ಬಂದು ಅಚ್ಚಲು ಗ್ರಾಮದಿಂದ ಹೊಂಗಾಣಿದೊಡ್ಡಿ ಗ್ರಾಮಕ್ಕೆ ಹೋಗಬೇಕು ಎಂದರೆ ಸರಿ. ಕಂಸಾಗರದಿಂದ ಚಾ.ಸಾ. 4 ಮತ್ತು 6 ರವರನ್ನು ಕರೆದುಕೊಂಡು ಬಂದಿದ್ದು, ಚಾ.ಸಾ. 5 ರವರನ್ನು ಹೊಂಗಾಣಿದೊಡ್ಡಿಯಿಂದ ಕರೆದುಕೊಂಡು ಬಂದೆವು. ಚಾ.ಸಾ, 4 ರಿಂದ 6 ರವರ ಪರಿಚಯ ನನಗೆ ಇರಲಿಲ್ಲ. ಚಾ,ಸಾ 4 ಮತ್ತು 6 ರವರನ್ನು ಕರೆದುಕೊಂಡು ಬಂದಾಗ ಸಮಯ ರಾತ್ರಿ 2 ಗಂಟೆ ಈ ವಿಚಾರವನ್ನು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ಚಾ.ಸಾ.5 ರವರನ್ನು ಕರೆದುಕೊಂಡು ಬಂದಾಗ ರಾತ್ರಿ 2 ಗಂಟೆ.

ಘಟನಾ ಸ್ಥಳದಲ್ಲಿ ಬಂದೂಕುಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಆರೋಪಿತರ ಸಹಿಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಠಾಣೆಯಲ್ಲಿ ಅಮಾನತ್ತು ಪಂಚನಾಮೆ ಮಾಡಿದ್ದು ಅಲ್ಲಿ ಆರೋಪಿತರ ಸಹಿ ತೆಗೆದುಕೊಂಡಿಲ್ಲ. ಆರೋಪಿತರ ಬೆರಳಚ್ಚನ್ನು ತೆಗೆದುಕೊಂಡ ಬಗ್ಗೆ ನೆನಪಿಲ್ಲ. ಆರೋಪಿತರ ಬೆರಳಚ್ಚನ್ನು ಎಫ್.ಎಸ್.ಎಲ್.ಗೆ ಕಳುಹಿಸಿರುವುದಿಲ್ಲ ಮತ್ತು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ. ಗಸ್ತು ಕರ್ತವ್ಯಕ್ಕೆ ಹೋಗುವಾಗ ಎಂ.ಓ 1 ಮತ್ತು 2 ಅನ್ನು ಅಮಾನತ್ತುಪಡಿಸಿಕೊಳ್ಳಲು ಬಿಳಿ ಬಟ್ಟೆಯನ್ನು ತೆಗೆದುಕೊಂಡು ಹೋಗಿರಲಿಲ್ಲ. ಘಟನಾ ಸ್ಥಳದಲ್ಲಿ ಬಂದೂಕುಗಳನ್ನು ವಶಪಡಿಸಿಕೊಂಡು ಬಿಳಿ ಬಟ್ಟೆಯಲ್ಲಿ ಹಾಕಿ ಎಸ್ ಎಂಬ ಅಕ್ಷರದಿಂದ ಶೀಲು ಮಾಡಿ ಸಾಕ್ಷಿದಾರರ ಸಹಿಯನ್ನು ಶೀಲಿಗೆ ಪಡೆದುಕೊಂಡಿರುವುದಿಲ್ಲ.

ಅಮಾನತ್ತುಪಡಿಸಿಕೊಂಡ ದ್ವಿಚಕ್ರ ವಾಹನದ ಮಾಲೀಕರು ಯಾರು ಎಂಬ ದಾಖಲೆಯನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿರುವುದಿಲ್ಲ. ಆರೋಪಿತರು ಯಾವುದೇ ಬಂದೂಕುಗಳನ್ನು ಸಾಗಾಟ ಮಾಡುತ್ತಿರಲಿಲ್ಲ, ಅಂಕಿ ಸಂಖ್ಯೆಯ ಸಲುವಾಗಿ ಸುಳ್ಳು ಪಂಚನಾಮೆಯನ್ನು ಸೃಷ್ಟಿ ಮಾಡಿ, ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಠಾಣೆಗೆ ಬಂದಾಗ ಸಮಯ 3 ಗಂಟೆ ಆಗಿತ್ತು ಸಾಕ್ಷಿ ಪುನಃ ನೆನಪಿಲ್ಲ. ವರದಿಯನ್ನು ಠಾಣೆಗೆ ಬಂದ ಮೇಲೆ ತಯಾರು ಮಾಡಿದೆ. ವರದಿಯನ್ನು ತಯಾರು ಮಾಡು 15 ನಿಮಿಷ ಆಯಿತು. ನಿ.ಪಿ.4 ವರದಿಯನ್ನು ಯಾರು ಬೆರಳಚ್ಚು ಮಾಡಿದರು ಎಂದು ಈಗ ನೆನಪಿಲ್ಲ. ಸದರಿ ವಿಷಯವನ್ನು ನಿ.ಪಿ.4 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಜಿಲ್ಲಾಧಿಕಾರಿಯವರಿಗೆ ಸಮುಚಿತ ಮಾರ್ಗವಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಅನುಮತಿ ಕೋರಿದ್ದು. ಆ ರೀತಿ ಸಮುಚಿತ ಮಾರ್ಗವಾಗಿ ಸಲ್ಲಿಸಿಲ್ಲ ಪತ್ರವನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿಲ್ಲ. ಎಂ.ಓ 1 ಮತ್ತು 2 Loaded ಆಗಿರಲಿಲ್ಲ ಈ ವಿಷಯವನ್ನು ನಾನು ವರದಿಯಲ್ಲಿ ಬರೆದಿಲ್ಲ. ಇತರೆ ಸ್ಫೋಟಕ್ಕೆ ಸಂಬಂಧಿಸಿದ ವಸ್ತುಗಳು ಇದ್ದ ಬಗ್ಗೆ ಶೋಧನೆ ಮಾಡಿಲ್ಲ. ಎಂ.ಓ 1 ಮತ್ತು 2 ಬಂದೂಕುಗಳನ್ನು ನನ್ನ ಸಿಬ್ಬಂದಿಯೇ ಎತ್ತು ಕೊಟ್ಟರು. ಆ ರೀತಿ ಎತ್ತಿಕೊಟ್ಟರು ಎಂದು ಮಹಜರ್ ಮತ್ತು ವರದಿಯಲ್ಲಿ ನಮೂದಿಸಿರುವುದಿಲ್ಲ. ಆರೋಪಿತಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಮತ್ತು ತನಿಖೆಯಲ್ಲಿ ಆರೋಪಿ ಯಾವುದೇ ತಪ್ಪು ಮಾಡದೇ ಇರುವುದು ಕಂಡುಬಂದರೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **4.35** ರವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,
3 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕನಕಪುರ